

## ಮಾತುಕತೆ

ಆತ ಬಾಲ್ಕನಿಯಲ್ಲಿ ಕುಳಿತು ವಿಸ್ಕಿ ಕುಡಿಯುತ್ತಿದ್ದ. ಪಕ್ಕದಲ್ಲೇ ಹೆಂಡತಿ ಕುಳಿತಿದ್ದಳು. ಆತ ಭಾವುಕನಾಗಿ ಹೇಳಿದ: 'ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ಒಂದು ವೇಳೆ ನೀನಿಲ್ಲವಾದರೆ ಹೇಗೆ ಜೀವಿಸುವುದು ಎನ್ನುವುದೇ ನನಗೆ ಗೊತ್ತಾಗುತ್ತಿಲ್ಲ...'

ಹೆಂಡತಿ ಕೇಳಿದಳು: ಇದು ನೀನು ಮಾತನಾಡುತ್ತಿರುವುದೋ.. ಅಥವಾ ನಿನ್ನೊಳಗಿನ ವಿಸ್ಕಿ ಮಾತನಾಡುತ್ತಿದೆಯಾ?

ಆತ ತಣ್ಣಗೆ ಉತ್ತರಿಸಿದ: ಎರಡೂ ಅಲ್ಲ, ನಾನು ವಿಸ್ಕಿ ಜತೆ ಮಾತನಾಡುತ್ತಿದ್ದೇನೆ..!

★★★

## ಡೋಂಟ್ ಡಿಸ್ಟರ್ಬ್!

ವ್ಯಕ್ತಿಯೊಬ್ಬನ ಟೀ ಶರ್ಟ್ ಹಿಂದೆ ಹೀಗೆ ಬರೆದಿತ್ತು:
ನನ್ನನ್ನು ಯಾರೂ ಡಿಸ್ಟರ್ಬ್ ಮಾಡಬೇಡಿ..
ಏಕೆಂದರೆ ನಾನು ವಿವಾಹಿತ
ಈಗಾಗಲೆ
ಸಾಕಷ್ಟು ಡಿಸ್ಟರ್ಬ್ ಆಗಿದ್ದೇನೆ!

★★★

## ಏಕೆ?

ಆತ ಹೆಂಡತಿಗೆ ಚೆಂದದ ನೆಕ್ಲೇಸ್ ತಂದು ನೀಡಿದ. ಆಕೆ ಆತನ ಜತೆಗೆ 6 ತಿಂಗಳು ಮಾತೇ ಆಡಲಿಲ್ಲ!

ಏಕೆ? ಆ ನೆಕ್ಲೇಸ್ ನಕಲಿ ಆಗಿತ್ತೇ?

ಅಲ್ಲ–

ಹಾಗೆಂದು ಅವರ ಮಧ್ಯೆ ಒಪ್ಪಂದವಾಗಿತ್ತು!

★★★

## ಉತ್ತರ

ಗಂಡ: ದಾರಿಯಲ್ಲಿ ಅಲ್ಲಾವುದ್ದೀನನ ದೀಪ ಸಿಕ್ಕಿತು ಕಣೆ. ಏನು ಬೇಕಾದರೂ ಕೇಳು ಅಂದಿತು.

ಹೆಂಡತಿ: ಹೌದಾ! ನೀವೇನು ಕೇಳಿದಿರಿ?

ಗಂಡ: ನನ್ನ ಹೆಂಡತಿಯ ಬುದ್ಧಿಶಕ್ತಿಯನ್ನು ಹತ್ತುಪಟ್ಟು ಹೆಚ್ಚಿಸು ಎಂದು ಕೇಳಿದೆ.

ಹೆಂಡತಿ: ಅಯ್ಯೋ.. ನೀವೆಷ್ಟು ಒಳ್ಳೆಯವರು. ಆ ದೀಪ ಹಾಗೆಯೇ ಮಾಡಿತೆ?

ಗಂಡ: ಇಲ್ಲ, ಝೀರೊ ಇರುವುದನ್ನು ಹತ್ತು ಪಟ್ಟು ಹೆಚ್ಚಿಸಿದರೂ ಅಷ್ಟೇ ಆಗುತ್ತದೆ ಎಂದು ಹೇಳಿತು.

★★★

## ಪ್ರಶ್ನೋತ್ತರ



ಸಂತಾ: ಈ ಪೆಟ್ಟಿಗೆಯಲ್ಲಿ ಏನಿದೆ ಎಂದು ಹೇಳಿದರೆ ಅದರಲ್ಲಿರುವ ಅರ್ಧದಷ್ಟು ಮೊಟ್ಟೆಗಳನ್ನು ನಿನಗೇ ಕೊಡುತ್ತೇನೆ. ಹಾಗೆಯೇ ಎಷ್ಟು ಮೊಟ್ಟೆಗಳಿವೆ ಎಂದು ಹೇಳಿದರೆ ಹತ್ತಕ್ಕೆ ಹತ್ತನ್ನೂ ನಿನಗೇ ಕೊಟ್ಟುಬಿಡುತ್ತೇನೆ. ಜತೆಗೆ, ಇದು ಯಾವುದರ ಮೊಟ್ಟೆ ಎಂದು ಹೇಳಿದರೆ ಮೊಟ್ಟೆ ಇಟ್ಟ ಕೋಳಿಯನ್ನೂ ನಿನಗೇ ಕೊಡುತ್ತೇನೆ. ಉತ್ತರಿಸು ನೋಡೋಣ?

ಬಂತಾ: ಇಷ್ಟೆಲ್ಲ ಪ್ರಶ್ನೆ ಒಟ್ಟಿಗೆ ಕೇಳಿದರೆ ಹೇಗೆ? ಉತ್ತರಕ್ಕೆ ಒಂದು ಸಣ್ಣ ಕ್ಲೂ ಕೊಡು.. ಗೆಳೆಯಾ!

(ಇಂಟರ್‌ನೆಟ್‌ನಲ್ಲಿ ಓದಿದ್ದು)




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

ಬೆಂಗಳೂರು ಮೈಸೂರು 9880444450

